(692)

ಈ ವಾರದ ಭವಿಷ್ಯ

ಕೃಷ್ಣಾಪುರದ ವೆಂಕಟನರಸಿಂಹಾಚಾರ್
ಶ್ರೀ ರಾಮಕೃಷ್ಣ ಜ್ಯೋತಿಷಾಲಯ

ಮೇಷ

ತಾ|| 1 2 ಶತ್ರುಜನ ಮುಂದುವರಿಸುವಿಕೆ ಸ್ತ್ರೀಗೆ ಆನಾರೋಗ್ಯ ಪ್ರಯತ್ನ ಕಾರ್ಯ ಭಂಗ ಬಂಧು ವಿರೋಧ ಗೋಧವೆ ದಾನಕೊಡಿ ಸುಖ. ಉಳಿದ ದಿವಸಗಳಲ್ಲಿ ಆರೋಗ್ಯ ಸುಖ ಗೃಹಾಭಿವೃದ್ಧಿ ಶುಭಕಾರ್ಯ.

ವೃಷಭ

ನಿಮಗೆ ಪ್ರೀತಿ ಬಂಧು ಆಹ್ವಾನ ಸ ಕಾರಿ ಜನರಿಂದ ಮನ್ನಣೆ. ಶತ್ರುಂಜಯ ಸ್ತ್ರೀಪುತ್ರ ಸೌಖ್ಯತೆ ವಂಗಳ ಕಾರ್ಯ. ತಾ||3 4 ಫಲ ಕಡಿಮೆ ಆದಿತ್ಯ ಹೃದಯ ಪಾರಾಯಣಮಾಡಿ ಮಂಗಳ.

ಮಿಥುನ

ಈ ವಾರದಲ್ಲಿ ಒಂಭುಭಾಗ್ಯ ರಾಜಕೀಯ ಜನರಿಂದ ಲಾಭ ಧಾನ್ಯ ಶೇಖರಣೆ ನಷ್ಟ ದ್ರವ್ಯ ಲಾಭ ಭೃತ್ಯ ಸುಖ ಶತ್ರುಂಜಯ ಗೃಹಾಭಿವೃದ್ಧಿ ಎಳ್ಳು ದಾನಮಾಡಿ ಉತ್ತಮ ಫಲವಿರುತ್ತೆ.

ಕರ್ಕಾಟಕ

ತಾ|| 1 2 ವಿರೋಧ ವಾರ್ತಾ ಜಂಗಳತೆ ಜನರಲಿ ಮನಸ್ತಾಪ ಹಸೀಕಡಲೇ ದಾನನೂಡಿ ಆರ್ಚನೆಮಾಡಿಸಿ ಸೌಖ್ಯ ಉಳಿದ ದಿವಸಗಳಲ್ಲಿ ಸುಖಾಧಿಕ ಕಾರ್ಯಾನುಕೂಲತೆ ಸ್ತ್ರೀಪುತ್ರ ಸೌಖ್ಯತೆ ಬಂಧುಭಾಗ್ಯ ಸತ್ಕಾರ್ಯಾನುಕೂಲತೆ.

ಸಿಂಹ

ಸ್ನೇಜನರಲ್ಲಿ ವಿರೋಧ ಧಾನ್ಯ ನಷ್ಟ ಸ್ತ್ರೀ ಕಲಹ ಸ್ಥಾನಾಂತರವಾಸ ಸನಗ್ರಹ ಪೂಜೆಮಾಡಿ ಕ್ಷೇಮ. ತಾ|| 6 7 ಶುಭಫಲ.

ಕನ್ಯಾ

ರಾಜಕೀ ಕಾರ್ಯದಲ್ಲಿ ಪ್ರವೇಶಿಸಬಾರದು ವ್ಯಯಾಧಿಕ ಶತ್ರು ವೃದ್ಧಿ ಸೂರ್ಯ ನಮಸ್ಕಾರಮಾಡಿ ಕ್ಷೇಮ ತಾ|| 1 2 ಉತ್ತಮ ಫಲ.

ತುಲಾ

ರಾಜಕೀ ಕಾರ್ಯಾನುಕೂಲತೆ ಸ್ತ್ರೀ ಪುತ್ರ ಸೌಖ್ಯ ಶತ್ರುಂಜಯ ಅಧಿಕ ಸೇವಾ ಫಲ ಬಂಧುಮಿತ್ರ ಸಮಾಗಮ. ತಾ|| 6 7 ವಿರೋಧ ಫಲ. ಶ್ರೀ ಕೃಷ್ಣ ಪೂಜೆಮಾಡಿಸಿ ಫಲ ಉತ್ತಮ.

ವೃಶ್ಚಿಕ

ಮಿಶ್ರ ಫಲ ರಾಜಕೀ ಕಾರ್ಯದಲ್ಲಿ ಅನುಕೂಲತೆ. ಭೂಮ್ಯಮೂಲಕ ಕಾರ್ಯಭಂಗ ವ್ಯಯಾಧಿಕ ಶತ್ರುಜರ ಮುಂದುವರಿಸುವಿಕೆ. ಸಂಚಾರದಿಂದ ಆನಾರೋಗ್ಯ ಸಹಸ್ರನಾಮ ಪಾರಾಯಣ ಮಾಡಿ ಮಂಗಳ.

ಧನು

ಜನರಿಂದ ಉಪಕಾರ ಧರ್ಮ ಬುದ್ಧಿ ರಾಜಕೀ ಜನ ಸೌಖ್ಯತೆ ದೇವ ಭಕ್ತಿ ತಾ||3 4 ವಿರೋಧ ಫಲ ಅರ್ಚನೆಮಾಡಿಸಿ ಫಲ ಉತ್ತಮ.

ಮಕರ

ಈ ವಾರ ಹುತ್ತಕ್ಕೆ ಹಾಲು ಬಿಡಿಸಿ ಫಲ ಉತ್ತಮ. ತಾ||4.5,6 ಕಾರ್ಯ ಭಂಗ ವ್ಯಯಾಧಿಕ ವಿರೋಧ ಬಾಕಿ ಉಳಿವಸಗಳಲ್ಲಿ ಕಾರ್ಯ ದಕ್ಷತೆ ಶುಭೋದಯ ಉತ್ಸಾಹ.

ಕುಂಭ

ಚಂಚಲತೆ ಪುತ್ರಜನ ವಿರೋಧ ಕೀರ್ತಿ ಭಂಗ ಆನಾರೋಗ್ಯ ಶುಭ ಕಾರ್ಯಡಲ್ಲಿ ಮನಸ್ತಾಪ. ಶತ್ರುಜನ ಮುಂದುವರಿಸುವಿಕೆ. ಸಹಸ್ರ ನಾಮ ಪಾರಾಯಣಪೂಜಾ ಮಾಡಿಸಿ ಫಲ ಉತ್ತಮ. ತಾ||3 4 ಫಲ ಉತ್ತಮ.

ಮೀನ

ತಾ||3. 4. ಕಾರ್ಯ ಭಂಗ ಬಂಧು ವಿರೋಧ ಸವಗ್ರಹ ಪೂಜೆಮಾಡಿಸಿ ವಂಗಳ ಬಾಕಿ ದಿವಸಗಳಲ್ಲಿ ಮಂಗಳಕರ.

ರೊಮೆಲನು ಫ್ರಾನ್ಸಿನಲ್ಲಿರುವನೆಂದು ತಿಳಿಯಬಂದಿದೆ. ಕಳೆದ ಮಾರ್ಚಿ 19 ರಂದೂ ಈತನು ಉತ್ತರ ಆಫ್ರಿಕಾದಲ್ಲಿ ಇಲ್ಲವೆಂದು ಹೇಳುತ್ತಾರೆ.

ಮಾಂಘೀರ್ ಮ್ಯುನಿಸಿಪಲ್ ಎಲ್ಲೆಯಲ್ಲೂ ಚಾಮು ಪಟ್ಟಣದ ಎಲ್ಲೆಯಲ್ಲೂ ಯಾವ ಡಿಫೆನ್ಸ್ ರೂಲ್ಸಿನ ಮೇರೆ ಕತ್ತಿ ದೊಣ್ಣೆ, ಭರ್ಜಿ ಮತ್ತು ಭಾಲಾಪ್‌ಗಳನ್ನು ಬೀದಿಗಳಲ್ಲಿ ತೆಗೆದುಕೊಂಡು ಹೋಗಬಾರದೆಂದು ಪ್ರಕಟಣೆಯಾಗಿದೆ.

ಲಂಡನ್‌ನಲ್ಲಿರುವ ಮಕ್ಕಳ ಸಂಘದ ಹೆಂಗಸರು ಸ್ಟಾಲಿನ್‌ಗ್ರಾಡಿನಲ್ಲಿರುವ ಮಕ್ಕಳಿಗೆ 12 ಸಾವಿರ ಪೌಂಡು ದಾನ ಮಾಡಿರುತ್ತಾರೆ.

ರಷ್ಯಾ ಸರ್ಕಾರದವರು ಪೋಲಿಸ್ ಸರ್ಕಾರದೊಡನೆ ಸಂಬಂಧ ತ್ಯಜಿಸಿರುತ್ತಾರೆ.

For All Kinds of
Printing & Binding

The Satyavadi Press

Chamarajapuram
Mysore

SATYAVADI Oldest Newspaper of Mysore ವಾರದ ಸಂಚಿಕೆ
Daily & Weekly Reg No. M 1299

ಸತ್ಯವಾದಿ

ಸಂಪುಟ 26 ಸಂಚಿಕೆ 294] ಶನಿವಾರ 1—5—1943 [6 ಪೈ

ಯುದ್ಧವಾರ್ತೆ

ಅಮೇರಿಕಾ ಯುದ್ಧ ಸಚಿವರು ಆಸ್ಟ್ರೇಲಿಯಾಕ್ಕೆ ಇನ್ನೂ ಭೀಕರ ತಪ್ಪಿಲ್ಲವೆಂದು ಹೇಳುವರು.

ರಷ್ಯಾದ ಕ್ಯೂಬನ್‌ನಲ್ಲಿ ಯುದ್ಧ ಪ್ರಾರಂಭವಾದಂತೆ ಕಾಣುತ್ತೆ. ಎರಡು ದಿನಗಳಲ್ಲಿ 116 ಶತ್ರುವಿಮಾನಗಳು ನಾಶವಾಗಿವೆ.

ಜರ್ಮನಿಗೆ ತುರ್ಕಿ ಮೇಲೆ ವಕ್ರದೃಷ್ಟಿ ಬಿದ್ದಂತೆ ಕಾಣುತ್ತೆ.

ಸ್ಪಾಲ್ಲೋನಿಕಾ ಮೆಸಿಡೋನಿಯಗಳಲ್ಲಿ ಜರ್ಮನರು ಕೋಟೆಕೊತ್ತಲುಗಳನ್ನು ನಿರ್ಮಿಸಿ ಬಲಪಡಿಸುತ್ತಿರುವರೆಂದು ತಿಳಿಯಬರುತ್ತೆ.

ಜರ್ಮನ್ ಸೇನೆ ಬಲ್ಗೇರಿಯಾಕ್ಕೆ ಬಂದಿದೆ.

ಟ್ಯುನಿಷಿಯಾದಲ್ಲಿ ಬಿಜರ್ಟೆ ಹತ್ತಿರ ಒಂದು ಗುಡ್ಡವನ್ನು ಬ್ರಿಟಿಷರು 8 ನೇ ಪಡೆಯು ಆಕ್ರಮಿಸಿದೆ.

ಗೀತಾಂಜಲಿ ಪುಸ್ತಕವು ಪ್ರಕಟವಾದ ಕೂಡಲೇ ಇಂಗ್ಲೆಂಡಿನ ಆಸ್ಥಾನ ಕವಿಯಾದ ರಾಬರ್ಟ್‌ಬ್ರಿಡ್ಜಸ್‌ಅಕ್ಸ್‌ಫರ್ಡ್ ಮೊದಲಾಗಿ ಇತರ ಕವಿಗಳು ಕವಿ ಟಾಗೋರರಿಗೆ ಅಕ್ಸ್‌ಫರ್ಡ್ ಡಿಗ್ರಿಕೊಡಿಸಬೇಕೆಂದರು, ಆಗ ಆ ವಿಶ್ವವಿದ್ಯಾಸಿಲಯಕ್ಕೆ ಲಾರ್ಡ್ ಕರ್ಜನರು ಛಾನ್ಸಲರಾಗಿದ್ದರು. ಬಂಗಾಳಾ ವಿಭಾಗದಲ್ಲಿ ಟಾಗೋರರು ಮನೆತನದವರಿಗೂ ಕರ್ಜನರಿಗೂ ಮನಸ್ತಾಪವುದ್ದರಿಂದ ತಮ್ಮ ಸೇಡನ್ನು ಡಿಗ್ರಿಕೊಡದೆ ತೀರಿಸಿಕೊಂಡರು. ಕವಿ ಈಟ್ಸ್‌ರವರು ಟಾಗೋರರೊಡನೆ ಸ್ನೇಹ ಭಾವದಿಂದಿದ್ದರೂ, ಕಡೆಗೆ ಟಾಗೋರರು ಒಂಗಾಳಾ ಭಾಷೆಯಲ್ಲಿ ಬರೆಯದೆ ಇಂಗ್ಲೀಷಿನಲ್ಲಿ ಒರೆಯ ತೊಡಗಬೇಕೆಂದಕ್ಕೆ ಉತ್ತೇಜಿಸಲ್ಪಟ್ಟರು. ಈ ಗುಟ್ಟನ್ನು ಸರ್ ವಿಲಿಯಂ ರಾಥನ್‌ಸ್ಟೈನ್‌ರವರು ಈಗ ಹೊರಗೆಡವಿರುವರಲ್ಲದೆ. ತಾವೂ ಕೂಡ ಟಾಗೋರರು ಗೀತಾಂಜಲಿಯನ್ನು ಪ್ರಕಟಿಸಿದ ಮೇಲೆ ಇಂಗ್ಲೀಷಿನಲ್ಲಿ ಬರೆಯುತ್ತಾ ಬಂದುದರಿಂದ ತಮ್ಮ ಹೆಸರು ಕಳೆಗುಂದುತ್ತಾ ಬಂದಿತೆಂದಿರುವರು,

ಶ್ರೀ 'ಓಂ' ಬ್ರಾಂಡ್ ಕೇಸರಿ ಈ "ಓಂ" ಗುರ್ತಿನ ಕೇಸರಿಯು ಅತ್ಯಂತ ಪರಿಶುದ್ಧವಾದುದು. ಇದರಲ್ಲಿ ಯಾವ ಅಕ್ಷೇಪಕರವಾದ ಪದಾರ್ಥವೂ ಸೇರಿಲ್ಲ; ಮತ್ತು ಶಾಸ್ತ್ರೀಯವಾಗಿ ಪರಿಶುದ್ಧವಾದುದು. ದೇವಸ್ಥಾನಗಳಲ್ಲಿಯೂ ದೇವರ ಪೂಜೆಗೂ, ಔಷಧಿಗಳಿಗೂ ತಿಂಡಿ ಪದಾರ್ಥಗಳಿಗೂ ಸುಖ ಸಂತೋಷಕಾಲದಲ್ಲೂ ಉಪಯೋಗಿಸಲ್ಪಡಲು ಅರ್ಹವಾಗಿದೆ.



ಅತ್ಯಂತ ಪರಿಶುದ್ಧವಾದುದೆಂದು ಗ್ಯಾರಂಟಿ ಹೊಂದಿದೆ.

ವಲ್ಲಭದಾಸ್ ತೇಜಪಾಲ್
೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಜಿ. ಟಿ. ಮದರಾಸು

ಈ ವಾರದ ಕಥೆ.

ಓದು ಊಟವನ್ನಿಡುವುದೇ?

ವೆಂಕಯ್ಯನವರಿಗೆ 50 ನೆಯ ವಯಸ್ಸಿನಲ್ಲಿ ಪುತ್ರೋತ್ಪತ್ತಿಯಾಯಿತು. ಅ ವರಿಗೆ ಇದು ಎಷ್ಟೋ ಸುಖೋಷವನ್ನುಂಟುಮಾಡಿತು. ಊಟಗೀಟಗಳಿಲ್ಲದೆ ತೀ ಥಯಾತ್ರೆಗಳನ್ನು ಮಾಡಿದ ಫಲವು ಈಗ ದೊರೆಯಿತೆಂದು ಪಾರ್ವತಮ್ಮ ತಾನು ಸೇವಿಸಿದ ದೇವತೆಗಳ ಅನುಗ್ರಹದಿಂದ ಆಗ್ಗೆ ಪ್ರಾಪ್ತವಾದ ದಕ್ಕಾಗಿ ಹರ್ಷ ಸಿತಳು. ಶಕ್ತ್ಯನುಸಾರ ತನ್ನ ಶಕ್ತಿಗೆ ಬಾರದ ಹರಿಕೆಗಳನ್ನು ಸಲ್ಲಿಸುವುದಾಗಿ ಪ್ರಾರ್ಥನೆ ಮಾಡಿಕೊಂಡಳು. ಬರೀ ಮಾತುಗಳನ್ನು ಎಷ್ಟಾದರೂ ನುಡಿಯಬಹುದಷ್ಟೆ!

ಆ ಗ್ರಾಮಸ್ಥರಲ್ಲಿ ವೆಂಕಯ್ಯನವರು ಮರ್ಯಾದೆ ಮತ್ತು ಗೌರವಗಳಿಸಿದ್ದರು. ವಿಶೇಷ ಧನವಂತರೇನೂ ಅಲ್ಲ. ಹಿರಿಯರು ಅರ್ಜಿಸಿದ 4 ಎಕರೆ ಮಳೆ ಜಮೀನಿನಿಂದ ತಮಗೆ ಅತಿಯಾದ ವ್ಯಯಗಳು ಯಾವುದೂ ಇಲ್ಲದೆ ಕಾಲಕಳೆ ಯುತ್ತಿದ್ದರು. ಮಾತುಸರಾಗಲಿದ್ದರೆ. ಪಾರ್ವತಮ್ಮನು ಕೂಡ ವೆಂಕಯ್ಯನವರ ಮರ್ಯಾದೆಗೆ ತಕ್ಕ ಹೆಂಡತಿಯಾಗಿದ್ದಳು.

ಮಕ್ಕಳು ಇಲ್ಲದೆ ಒಹಳ ಕಾಲವಾದ ಮೇಲೆ ಸಂತಾನವಾದದರಿಂದಿರಬಹುದೊ ಹೆಣ್ಣುಗಸಿಗೆ ಹೆಸರಿಟ್ಟಿದ್ದೆ ಭಂಗಾರ. ಪುಟ್ಟಪಾಪ ಮತ್ತು ರತ್ನಗಳ ರಾಶಿ ಎಂ ಬೀ ರೀತಿಯಲ್ಲಿ ಕರೆಯುತ್ತಿದ್ದರು.

ಒಂದು ದಿನ ಸಾಯಂಕಾಲ 4 ಗಂಟೆಯ ಸಮಯದಲ್ಲಿ ವೆಂಕಯ್ಯನವರು ಹ ಜಾರದಲ್ಲಿ ಕುರ್ಚಿಯ ಮೇಲೆ ಕುಳಿತುಕೊಂಡು, ಏನೇ ನಮ್ಮ ಭಂಗಾರಕ್ಕೆ 5 ವರ್ಷಗಳಾದವು ಈ ವಲ್ಲಾ ಜಾತಿಯವರು ಮಕ್ಕಳನ್ನು ಪಾಠಶಾಲೆಗೆ ಕಳಿಸುವರು. ನಮ್ಮ ಪಂಗುವನ್ನೂ ಕಳಿಸಿಸಬೇಕೆಂಬ ಯೋಚನೆಯಿದೆ. ನಿನ್ನ ಅಭಿ ಪ್ರಾಯವೇನು? ಎಂದು ಹೆಂಡತಿಯನ್ನ ಕೇಳಲು ಆ ಸುಡಿಗಳು ಪಾರ್ವತಮ್ಮ ನಿಗೆ ರುಚಿಸಲಿಲ್ಲ ಆದರೆ ಗುತ್ತಿಸಿಗೆ ವಿರುದ್ಧವಾಗಿ ಮಾತನಾಡುವಳಾಗಿರಲಿಲ್ಲ ವಾದದರಿಂದ, ನಿಮ್ಮ ಇಷ್ಟ, ಹಿಂದೆ ನಮ್ಮ ಮನೆಯಲ್ಲಿ ಯಾರೂ ಓದಿರಲಿಲ್ಲ ಹಿಂದಿನವರು ಆಚಾರಕ್ಕೆ ವಿರೋಧವಾಗಿ ನಡೆಯುವಾರದೆನ್ನುವರು. ಆಲೋಚನೆ ಮಾಡಿ" ಎಂದು ತಿಳಿಸಲು ಅಯ್ಯೋ ಹುಚ್ಚಿ! ಓದಿಗೂ ಆಚಾರಕ್ಕೂ ಏನು ಸಂಬಂಧ ಹಿಂದಿನವರು ಏನೆ ಯಿಲ್ಲದೆ ಹೇಗೋ ಕಾಲವನ್ನು ಕಳೆದರು. ಈಗಿ ನ ಕಾಲದಲ್ಲಿ ವಿದ್ಯೆಯು ಎಲ್ಲರಿಗೂ ಅವಶ್ಯಕ. ನನಗೆ ನನ್ನ ತಂದೆ ವಿದ್ಯೆಯನ್ನು ಕಲಿಸಲಿಲ್ಲವೆಂದಿದುದರಿಂದಲೇ ಅಲ್ಲವೆ ಈ ಕಾಲಕ್ಕೆ ತಕ್ಕ ರೀತಿಯಲ್ಲಿ ಇಲ್ಲದಿರುವುದು. ವಿದ್ಯೆಯು ಮನುಷ್ಯನಿಗೆ ಮೂರನೆಯ ಕಣ್ಣು. ಬ್ರಾಹ್ಮಣರು ವಿದ್ಯಾ ಸಂಪನ್ನ ರಾಗುವುದರಿಂದಲೇ ಆಚಾರ ವ್ಯವಹಾರಗಳಲ್ಲಿ ಇತರ ಜಾತಿಗಳವರಿಗಿಂತ ಉತ್ತ ಮಸ್ಥಾನದಲ್ಲಿರುವರು. ವಿದ್ಯೆಯು ಉದ್ಯೋಗಕ್ಕಲ್ಲವೆ ಹೋದರೂ ಉತ್ತಮ ರೀತಿಯಲ್ಲಾದರೂ ಜೀವಿಸಲೂ, ಶುಭಾಶುಭಗಳನ್ನರಿಯಲು ಸಾಧನರೂಪವಾಗುವುದು. ವಿದ್ಯೆಯಿಲ್ಲದಿರುವ ಕಾರಣದಿಂದಲ್ಲವೆ ಇತರ ಜಾತಿಗಳಲ್ಲಿಯು ಅನೇಕ ಧನವಂತರೂ ಸಾಮಾನ್ಯರೂ, ಗೌರವವೆಂದೇನೋ ಅರಿಯದೆ ಪುಳಿಗಿಂತ ಕಡೆಯಾಗಿ ವರ್ತಿ ಸುವರು. ಹಾಗೂ ಪರಿಗಣಿಸಲ್ಪಡುವರಿಲ್ಲ. ಎಷ್ಟು ಹಣವಂತನಾದರೂ ವಿ ದ್ಯೆಯಿಲ್ಲದವನ ಬಾಳು ದೀಪವಿಲ್ಲದ ಗೃಹದಂತೆ ಸರಿ. ವಿದ್ಯಾಹೀನನು ಪಶು ಸಮಾ ನನು. ಧನ, ಧಾನ್ಯ ವಸ್ತು, ಗೃಹ ಮೊದಲಾದವು ಮನುಷ್ಯ ಜೀವಿತಕಾಲದ ವರೆಗೆ ನಾಶವಾಗಬಹುದು ಆದರೆ ಕಷ್ಟಪಟ್ಟು ಕಲಿತ ವಿದ್ಯೆಯು ಮಾತ್ರ ಜೀವಿ ತಾವಸಾನದವರೆಗೂ ಇರುತ್ತದೆ" ಎಂದು ವಿದ್ಯೆಯಿಂದಾಗುವ ಲಾಭಗಳನ್ನು ತಿಳಿಸಿ ದನು. ಆಗ ಪಾರ್ವತಮ್ಮನು ಸರಿ ಹಾಗಾದ್ದಿಲ್ಲಿ ಒಳ್ಳೇ ದಿನ ನೋಡಿ ಕಳುಹಿಸಿಕೊ ಡಿ ಎಂದು ತನ್ನ ಒಪ್ಪಿಗೆಯನ್ನಿತ್ತಳು. ಹಾಗೆಯೇ ಮಾಡಬಹುದು. ಆದರೆ ನ ಮ್ಮ ಮಗುವಿಗೆ ಇದುವರೆಗೂ ಒಂದು ಸ್ಥಿರವಾದ ಹೆಸರನ್ನಿಟ್ಟಿಲ್ಲ. ನಾವು ಕರೆಯು ವ ಹೆಸರುಗಳು ಪಾಠಶಾಲೆಯಲ್ಲಿ ಕರೆಯಲ್ಪಡುವುದು ಯೋಗ್ಯವಾಗಿರುವುದಿಲ್ಲ. ಆದದರಿಂದ ಯಾವುದಾದರೂ ಸ್ಥಿರವಾದ ಹೆಸರೊಂದನ್ನಿಡಬೇಕು. ನಮ್ಮ ತಂದೆ ಯವರಿಂದ ಆಶೆಯಾ ತಾತವರ ಹೆಸರನ್ನಿಡಬೇಕೆಂದನ್ನಿಕೊಂಡಿದ್ದೇನೆ ಎಂದು ವೆಂಕ ಯ್ಯನು ಪುನಃ ಹೆಂಡತಿಗೆ ತಿಳಿಸಲು, ಆಕೆಯು ನೀವು ಕೋಪಮಾಡಿಕೊಳ್ಳುವ ಹಾ ಗಾದರೆ ಹೇಳುವುದಿಲ್ಲ. ಹಿಂದಿನ ಹೆಸರುಗಳೆಲ್ಲ ನಾಗರೀಕವಾಗಿರುವುದಿಲ್ಲ. ಆ ಹೆಸರುಗಳಿಗಿಂತ ಸ್ವಲ್ಪ ನಾಜೂಕಾದ ಹೆಸರನ್ನಿಡುವುದು ಒಳ್ಳೇದು. ಮೊನ್ನೆ ನ ಮ್ಮ ಅಣ್ಣನು ಒಂದಾಗ ಸವಾಶಿವನೆಂಬ ಹೆಸರಿಂದರೆಂದು ಹೇಳಿ ಹೋಗಿದ್ದಾನೆ. ಅಂಥಾ ಹೆಸರಿಡುವುದು ಚೆ ರತ್ತದೆ ಎಂದು ತನ್ನ ಅಭಿಪ್ರಾಯವನ್ನು ತಿಳಿ ದಳು ವೆಂಕಯ್ಯನು ಆ ಮಾತಿಗೆ ತಡಲು ಒಪ್ಪಿಕೊಂಡನು. (ಸಶೇಷ)

ವಾರ್ತಾತರಂಗ

ಜರ್ಮನಿ, ಇಟಲಿ, ಜಪಾನ್, ಇವು ಮೂರೂ ತಮ್ಮಲ್ಲಿದ್ದ ಶಕ್ತಿ (ಸಿಪಾಯಿ)ಯನ್ನು ರಣರಂಗಕ್ಕೆ ಬೆಟ್ಟರುತ್ತಾರೆ.

ಮೇ 1 ರಿಂದ ಮದರಾಸಿನಲ್ಲಿ ಯಾರ ಮನೆಯಲ್ಲಿ ಎಲೆಕ್ಟ್ರಿಕ್ ದೀಪ ಇಲ್ಲವೋ ಅಂಥ ಪ್ರತಿ ಸಂಸಾರಕ್ಕೂ ತಿಂಗಳಿಗೆ ಎರಡೂವರೆ ಶೀಶೆ ಸೀಮೆ ಎಣ್ಣೆ ಕೊಡಲಾಗುವುದು.

ಪ್ಯಾರಿಸ್ಸಿನ ಗೊಂಡೆಯ ಮೇಲೆ 'ಜಿ ಮತ್ತು ಜಿ = ಜಯ' ಎಂದು ಒರೆದಿದ್ದಕ್ಕೆ 30 ಫ್ರೆಂಚ್ ಗಂಡಸರೂ 10 ಹೆಂಗಸರೂ ಗುಂಡಿನ ಬಾಯಿಗೆ ತುತ್ತಾದರು. ಜಿ ಅಂದರೆ ಡಿಗಾಲ್ ಮತ್ತು ಜೋರೋ.

ಡಾ॥ ಜೇನ್ಸ್‌ರವರು ಅಂಡಸ್ಸಿನಲ್ಲಿ ಮಾತನಾಡುತ್ತಾ— ಜುಗೋಸ್ಲೋ ವಿಯಸ್ಸನ್ನೇ ನಿದ್ರೆ ಮಾಡಬೇಡಿ; ಫಿರ್‌ಲೆಂಡಿನವರು ಧಂಗೆ ಏಳಲು ಸಿದ್ಧರಾಗಿರುವರು; ಇನ್ನೇನಿಸ ಮಿತ್ರಪಕ್ಷದವರು ಸಹಾಯಕ್ಕೆ ಬರುವರು ಎಂದು ಹೇಳಿರುವರು.

ಸ್ವೀಡನ್ ಸರಕಾರವು ಜರ್ಮನಿಯವರು ತಮ್ಮ ಎಲ್ಲೆಯಲ್ಲಿ ವೈನುಗಳನ್ನು ಹಾಕಬಾರದೆಂದು ಎಚ್ಚರಿಸಿದೆ. ಜರ್ಮನರು ಅವರ ಎಲ್ಲೆಯಿಂದಾಚೆ ಅಂದರೆ 3 ಮೈಲಿಯೊಳಗಲ್ಲವೆಂದು ಉತ್ತರ ಕೊಟ್ಟದ್ದು ಸ್ವೀಡನ್ನಿಗೆ ತೃಪ್ತಿಕರವಾಗಿಲ್ಲ.

ಸಿಂಹಳ ದ್ವೀಪದಲ್ಲಿ ಮೇ 3 ರಿಂದ ಈಗಕೊಡುತ್ತಿರುವ ಅಕ್ಕಿ ರೇಷನಿಂಗ ದ್ವಿಗುಣ ಮಾಡುವರು. ಅರ್ಧಧಷ್ಟು ಅಕ್ಕಿ, ಇನ್ನರ್ಧದಷ್ಟು ಗೋಧಿ. ಈಗ್ ದಿವಸಕ್ಕೆ 1000 ಟನ್ ಗೋಧಿ ಖರ್ಚಾಗುತ್ತಿದೆ ಹಿಂದೆ ತಿಂಗಳಿಗೆ 4000 ಟನ್ ಗೋಧಿ ಉಪಯೋಗಿಸುತ್ತಿದ್ದನು

ಫೆಡರಲ್ ಕೋರ್ಟಿನ ತೀರ್ಪಾನಕ್ಕೆ ಡಿಫೆನ್ಸ್ ಆಫ್ ಇಂಡಿಯಾ ಆಕ್ಟ್ 2ಗೆ ಸೇ ಕಲಂಗೆ ಒಂದು ತಿದ್ದುಪಡಿಯನ್ನು ತಂದು ಮಾತುಗಳ ಜಮಾವಣೆಯನ್ನು ಸರಿಪಡಿಸುವುದೆಂದೂ, ಅದಕ್ಕಾಗಿ ಗಾಂಧೀಜಿಯವರನ್ನು ಬಿಡುವ ಸಂದರ್ಭವಿಲ್ಲವೆಂದೂ, ಲಂಡನ್ ಇಂಡಿಯಾ ಆಫೀಸು ಪ್ರಕಟಣೆ ಹೊರಟಿಸಿತ್ತು.

ಫೆಡರಲ್ ಕೋರ್ಟು ಜಡ್ಜ್‌ಮೆಂಟಿನ ಮೇಲೆ ಸರ್ ತೇಜ ಬಹದ್ದೂರ್ ಸಪ್ರೂರವರು, ಲೀಫ್ ಜಸ್ಟಿಸರನ್ನು ಮಂದಿಸಿ, ಸರ್ ಗ್ವಯರವರ ಒಂದು ಜಡ್ಜ್‌ಮೆಂಟು ಮಿ॥ ಎನೆರಿಯವರ 10ನೆ ಭಾಷಣಕ್ಕೆ ಸರಿಯಾಗುವುದು; ಮತ್ತು ಇಂಗ್ಲೆಂಡ್ ಪ್ರತಿನಿಧಿಯವರೊಬ್ಬರು ಇಂಡಿಯಾದಲ್ಲಿದ್ದು ಸರ್ಕಾರದವರು ಮಾಡುವ ತಪ್ಪನ್ನು ತಪ್ಪುಮಾಡಿದಾಗ ತೋರಿಸಲವಕಾಶವಾಯಿತೆಂದೂ ತಿಳಿಸಿರುವರು.

ಕೆನಡಾ ಪ್ರಧಾನ ಮಂತ್ರಿ ಮಿ॥ ಮೆಕೆಂಜಿಕಿಂಗ್ಸ್‌ರನರು ಮೇಜರ್ ಜನರಲ್ ಓಡ್ಲ್ಲಮರನ್ನು ಕಳಿಸಿರುತ್ತಾರೆ. ಇವರ ಒಂದು ಉದ್ದೇಶ ಹಿಂದೂಸ್ಥಾನ ಚೈನಾದ ವಿಷಯವನ್ನು ವಿವರವಾಗಿ ತಿಳಿದುಕೊಂಡು ಬರಬೇಕೆಂಬುದೇ ಆಗಿರ್ತು ಸಂತೆ ಇವರು ಮುಖಂಡರ್‌ಗಳ್ಳಾ ನೋಡುವರು, ಈಗ ಸರ್ ತೇಜ ಬಹದ್ದೂರ್ ಸಪ್ರೂರವರನ್ನು ಕಂಡು ದೀರ್ಘಕಾಲ ಮಾತನಾಡಿದರು. ಕಳೆದ ವಾರ ಇವರು ಬೊಂಬಾಯಿನಲ್ಲಿನ ಗಣ್ಯರೊಡನೆ ಮಾತುಕತೆ ನಡೆಸಿದರು, ದೆಹಲಿಯಲ್ಲಿ ಮಿ॥ ಜಿನ್ನಾರವರನ್ನು ನೋಡುತ್ತಾರೆ. ಇವರೆಲ್ಲ ಈ ದೇಶದಲ್ಲಿನ ಕೋಮುವಾರು ಪ್ರಶ್ನೆಗೆ ಪ್ರಾಶಸ್ತ್ಯವನ್ನು ಕೊಟ್ಟಿರುತ್ತಾರಂತೆ.

ಸುಪ್ರಸಿದ್ಧ ಗ್ರಂಥಕರ್ತರಾದ ಬರ್ನಾರ್ಡ್ ಷಾರವರು, ಭಾರತದ ಸಮಸ್ಯೆ ಬಗೆಹರಿಯಬೇಕಾದರೆ ಗಾಂಧೀಜಿಯವರನ್ನು ಚಕ್ರವರ್ತಿಯವರು ಬಿಡುಗಡೆ ಮಾಡಬೇಕೆಂದೂ, ಇವರನ್ನು ದಸ್ತಗಿರಿ ಮಾಡಿದ ಮಂತ್ರಿಗಳ ಬುದ್ಧಿ ಸ್ವಲ್ಪ ಮಂ ದವಾಗಿದ್ದುದೇ ಕಾರಣವೆಂದೂ, ಹೇಳಿರುವರು.

ಲಂಡನ್ ಏ. 29—ಜರ್ಮನರು ರಷ್ಯಾದಲ್ಲಿ ಮುನುಗ್ಗಲು ಸಿದ್ಧಪಡಿಸಿಕೊಳ್ಳು [illegible] ದೂ, ಪೂರ್ವ [illegible] ದ ಡಜನ್‌ಗಟ್ಟಿ ಸೈನ್ಯ ಡಿವಿಜನ್‌ಗಳು ಕ [illegible] ತಿಳಿಸಿದೆ.

ಸೈನಿಕರಿಗೆ ಆಹಾರ ಪದಾರ್ಥಗಳನ್ನು ಕಳುಹಿಸುವುದು ಹೇಗೆ ?

ರಣರಂಗಕ್ಕೆ ಯುದ್ಧ ಸಾಮಗ್ರಿಗಳನ್ನು ಕಳುಹಿಸುವುದು ಸುಲಭವಲ್ಲ. ಅದಕ್ಕೆ ಬೆಟ್ಟಗುಡ್ಡ ಪ್ರದೇಶವಾದರೆ ಅಷ್ಟ ಹೇಳತೀರದು. ಬ್ರಿಟಿಷರು ಅಸ್ಸಾಂ ನಿಂದ ಮುಂದೆ ನುಗ್ಗಿ ಜಪಾನಿಯರನ್ನು ಇನ್ನೂ ಏತಕ್ಕೆ ಸೆದೆಬಡಿದಿಲ್ಲವೆನ್ನಬಹುದು. ಈಗ ನಾವು ಅಸ್ಸಾಂ ವಿಷಯ ತೆಗೆದುಕೊಳ್ಳೋಣ. ಅಮೇರಿಕಾದವರು ಅಸ್ಸಾಂ ನಿಂದ ಬರ್ಮಾ ಎಲ್ಲೆಯಲ್ಲಿ ಬಡಾರ ಮಾಡಿರುತ್ತಾರೆಂಟ್ಟೆ ಅಲ್ಲಿಗೆ ಹೋಗಲು ಮಧ್ಯದಲ್ಲಿ ಕಾಗಾ ಪರ್ವತ ಶ್ರೇಣಿ ಇದೆ. ಈ ಅಮೆರಿಕಾದ ಸೈನ್ಯದವರಿಗೆ ಮದ್ದು ಗುಂಡು, ಔಷಧ, ಸರ್ಚಮಾನಪತ್ರಿಕೆ ಅವೆಲ್ಲಾ ಈ ಹಾದಿಯಲ್ಲೇ ಬರಬೇಕು. ಅಸ್ಸಾಮಿನಲ್ಲಿ ಅಮೆರಿಕಾ ಉಗ್ರಾಣವಿದೆ. ಅಲ್ಲಿಂದ ಮೇಲ್ಕಂಡ ಪದಾರ್ಥಗಳನ್ನು ಅನೇಕಗಳ ಮೇಲೂ ಸ್ಯಾರಷೂಟು ಮುಖಾಂತರವೂ ತರಿಸಿಕೊಳ್ಳುವರು.

ಈ ಉಗ್ರಾಣದಲ್ಲಿ ಒಬ್ಬ ಕೂಲಿಯವನು ಎಷ್ಟು ಹೊರಬಲ್ಲನೋ ಅಷ್ಟು ತೂಕದ ಗಂಟನ್ನು ಕಟ್ಟುವರು. ಈ ಹೊರೆಯನ್ನು ಮತ್ತಾರೂ ಈ ಬೆಟ್ಟದಲ್ಲಿ ಹೊಂಲಾರದು ಅಲ್ಲಿರುವ ನಾಗಾ ಜನರೇ ಈ ಕೆಲಸಕ್ಕೆ ನೇಮಿಸಲ್ಪಡುವರು. ಒಬ್ಬ ಕೂಲಿಗೆ 60 ಪೌಂಡು ತೂಕವನ್ನು ಕೊಡುತ್ತಾರೆ. ಇದಕ್ಕೆ ನಿಂತಿದ್ದು ಇಬ್ಬರು ಮೂವರು ಪಲ್ಲಕ್ಕಿ ಹೊರುವ ರೀತಿಯಲ್ಲಿ ಹೊತ್ತುಕೊಂಡುಹೋಗಿ ಅದಕ್ಕೂ ಭಾರವಾದದನ್ನು ಅನೆಯ ಮೇಲೆ ಸಾಗಿಸುವರು. ಒಂದು ಆನೆಯು ಒಂದು ಸಾವಿರ ಪೌಂಡು ಭಾರವನ್ನು ಹೊರುವುದು. ಇದಕ್ಕೆ ಅನೆಗೂ ಅದರ ಕೂಲಿಯವನಿಗೂ ದಿನಕ್ಕೆ ಹತ್ತು ರೂಪಾಯಿ ಕೂಲಿ ಕೊಡುತ್ತಾರೆ. ಈ ವಿಧಾನಗಳಲ್ಲದೆ ಲಾರಿಗಳಲ್ಲಿ ಕಳುಹಿಸಲಾಗುವುದಿಲ್ಲ. ಇಲ್ಲಿ ಪ್ರಸಂಚದಲ್ಲೆಲ್ಲೂ ಇಲ್ಲದಷ್ಟು ಮಳೆಯಾಗುವುದು. ಹೆಚ್ಚು ಹೊಳೆಯನ್ನು ಅನೇಕ ಸಾರಿ ದಾಟಬೇಕಾಗುವುದು. ಸಾಯಂಕಾಲದಲ್ಲಿ ಈ ಕೂಲಿಗಳೂ ಅನೆಗಳೂ ಒಂದು ಕಡೆ ತಂಗುತ್ತಾರೆ. ಅಲ್ಲಿ ಹರಿಯುವ ಹೊಳೆಯಲ್ಲಿ ಸ್ನಾನಮಾಡಿ ಊಟಮಾಡಿ ಅಲ್ಲಿ ಬಾತ್ರೈ ಮಲಗುವರು. ಸಾಯಂಕಾಲದಲ್ಲಿ ಧಣಿ ಕೂಲಿಗಳ ನಾಗಾ ಮೇಸ್ತ್ರಿಯು ಬಂದು ಧಾರಕ್ಕೆ ಒಂದು ಗಂಟನ್ನು ಕಟ್ಟುವನು. ತಾವು ಹೋಗಬೇಕಾದ ಸ್ಥಳವನ್ನು ಸೇರಿ, ತಾವು ತಂದ ಮೂಟೆಗಳನ್ನು ಸೈನಿಕರಿಗೆ ತಲಪಿಸಿದ ಕೂಡಲೇ ಅವರ ಮೇಸ್ತ್ರಿಯು ಪ್ರತಿಯೊಬ್ಬರ ಧಾರದಲ್ಲಿ ಕಟ್ಟಿದ್ದ ಗಂಟುಗಳನ್ನು ಪರಿಶೀಲಿಸುವನು. ಅದರಂತೆ ಪ್ರತಿ ಗಂಟಿಗೂ 10 ರೂಪಾಯಿನಂತೆ ಹಣವನ್ನು ಬೆಳ್ಳಿಯ ರೂಪಾಯಿ ರೂಪದಲ್ಲಿ ಕೊಡುವನು.

ಇದಲ್ಲದೆ ವಿಮಾನಗಳಲ್ಲಿಯೂ ಪ್ಯಾರಾಷೂಟುಗಳಲ್ಲಿಯೂ ಸಾಮಾನುಗಳನ್ನು ಕೆಳಹಿಸುವುದುಂಟು. ದಾರಿಯಲ್ಲಿ ವಿಮಾನ ಇಳಿಸಲು ಆಗದಿರುವ ಸ್ಥಳಗಳಲ್ಲಿ ಸುಣ್ಣದಿಂದ T ಗುರುತನ್ನು ಬಹುದೊಡ್ಡದಾಗಿ ಬರೆದಿರುತ್ತಾರೆ. ಇಲ್ಲಿ ಸಾಮಾನುಗಳನ್ನು ಪ್ಯಾರಷೂಟಿನಿಂದ ಕಳುಹಿಸಲಾಗುತ್ತೆ.

ಮಿಷಿಯಲ್ಲಿ ಗೋರಿಂಗರವರೂ ಲವಲಿಯವರೂ ಒಟ್ಟುಗೂಡಿ ಮಾತನಾಡಿದರೆಂದೂ ಅದು ಏನೆಂಬುದು ಹೊರಪಟ್ಟಿಲ್ಲವೆಂದೂ ತಿಳಿಯಬಂದಿದೆ.

ಯಾಧ್ಧಾಕ್ಕೆ ಹಾಕಿದ್ದ ಪುಂಡುಕಂದಾಯವೆಲ್ಲಾ ವಸೂಲಾಗಿದೆ.

ಇಷ್ಟರಲ್ಲೇ ಲವಲಿಯವರು ಎರಡೂವರೆ ಲಕ್ಷ ಫ್ರೆಂಚ್ ಕೂಲಿಗಾರರನ್ನು ಜರ್ಮನಿಗೆ ಕಳುಹಿಸುವರೆಂದೂ, ಜರ್ಮನಿಯಿಂದ 50 ಸಾವಿರ ಫ್ರೆಂಚ್ ಯುದ್ಧ ಖೈದಿಗಳನ್ನು ವಾಪಸ್ ಕರೆಸುವರೆಂದೂ ಗೊತ್ತಾಗಿದೆ.

ಫ್ರಾನ್ಸಿನಿಂದ 5 ಮಂದಿ ಫ್ರೆಂಚ್ ಮುಖ್ಯಸ್ಥರು ತಪ್ಪಿಸಿಕೊಂಡು ಲಂಡನ್ನಿಗೆ ಬಂದಿರುತ್ತಾರೆ. ಇವರು ಜನರಲ್ ಡಿಗಾಲರ ಸೈನ್ಯಕ್ಕೆ ಸೇರುವಂತೆ.

ಒಂದು ಏರ್‌ಕ್ರಾಫ್ಟ್ ಕ್ಯಾರಿಯರನ್ನು ತಯಾರ್ಮಾಡಲು 20 ಕೋಟಿ ರೂಪಾಯಿಗಳು ಖರ್ಚಾಗುವುದು.

ಅಡ್ಮಿರಲ್ ಕಿಂಗ್‌ರವರು ಶತ್ರುಗಳ ಸಬ್‌ಮೆರೀನ್ ಹಾವಳಿ ಈಗ ಕಮ್ಮಿಯಾಗುತ್ತಲಿದೆಯೆಂದೂ, ಇನ್ನೇನು 3-4 ತಿಂಗಳುಗಳಲ್ಲಿ ಪೂರ್ತಿ ನಿರ್ನಾಮವಾಗುವುದರಲ್ಲಿ ಸಂಶಯವಿಲ್ಲವೆಂದೂ ಹೇಳಿರುವರು.

ಅಮೇರಿಕಾ ವಿಮಾನ ನಿಪುಣರು ಜಪಾನಿಗಳು ವರ್ಷಕ್ಕೆ 12½ ಸಾವಿರ ವಿಮಾನಗಳಿಗಿಂತ ಬೇಚ್ಚಾಗಿ ತಯಾರ್ಮಾಡಲು ಆಗುವುದೇ ಇಲ್ಲ, ತಾವಾದರೊ ವರ್ಷಕ್ಕೆ 40 ಸಾವಿರಕ್ಕೆ ಮೀರಿ ತಯಾರಿಸಬಲ್ಲೆವೆಂದಿರುವರು ತಾವು ತಯಾರಿಸುವುದರಲ್ಲಿ ಮೂರನೇ ಒಂದು ಭಾಗವನ್ನು ಜಪಾನರು ತಯಾರಿಸಿದಂತಾಯಿತು ಎಂದಿರುವರು.

ಹಿಂದೂಸ್ಥಾನವೂ ಅಮೇರಿಕವೂ

ಫೆಸಿಫಿಕ್ ರಿಲೇಷನ್ಸ್ ಕಾನ್‌ಫರೆನ್ಸಿಗೆ ಹೋದಾಗ ರಾಯಿ ಬಹದ್ದೂರ್ ಮೆಹರ್‌ಚಂದ್ ಖನ್ನಾರವರು ಈ ಪ್ರಕಾರ ಹೇಳುವರು— ಅಮೇರಿಕಾದವರಿಗೆ ತಿಳಿದಿರುವುದು, ಮುಸ್ಲಿಂಲೀಗ್, ಪಾಕಿಸ್ತಾನ್ ; ಇಂಡಿಯಾ ವಿಷಯವೇ ತಿಳಿದಿಲ್ಲ. ಕಾಂಗ್ರೆಸ್ ಸತ್ತಿತು ಮುಸಲ್ಮಾನರು ಕಾಂಗ್ರೆಸ್ಸಿನಲ್ಲಿಲ್ಲ, ಇವರು ಯುದ್ಧಕ್ಕೆ ಸಹಾಯ ಮಾಡುತ್ತಿರುವರು. ಸೈನ್ಯದಲ್ಲಿ ಶೇಕಡ 90 ಮುಂದಿ ಮುಸಲ್ಮಾನರೂ ರಾಜಪುತ್ರರೂ ಸಿಕ್ಖರೂ. ಮರಾಟಿಗಳೂ ಇರುವುದರಿಂದ ಹೆದರಬೇಕಾಗಿಲ್ಲ. ಇವರೆಲ್ಲರೂ ಮುಸಲ್ಮಾನರೆಂದು ಅಮೇರಿಕಾದವರ ಮೆದಳಿನಲ್ಲಿ ಸೇರಿಹೋಗಿದೆ. ಇಂಡಿಯಾ ವಿಷಯ ಪ್ರಪಂಚಕ್ಕೆ ತಿಳಿಯಲು ಅನೇಕ ವರ್ಷಗಳಾಗಬೇಕು. ಗಾಂಧೀಜಿ ವಿಷಯ ತಿಳಿದೇ ಇಲ್ಲ. ಗಾಂಧೀಜಿಯವರು 110 ವರ್ಷದ ಮುಂದಿನವರೆಂದು ತಿಳಿದಿರುವರು. ಇವರಿಗೆ ಅಹಿಂಸೆ, ಸತ್ಯಾಗ್ರಹ, ಉಪವಾಸ, ಇವೆಲ್ಲಾ ಕಬ್ಬಿಣದ ಕಡಲೆಯಾಗಿದೆ ಅಸಹಕಾರವು ಜರ್ಮನರ ಕಡೆಯೆಂದು ತಿಳಿದಿರುವರು. ಹಿಂದುಗಳೆಲ್ಲಾ ದಂಗೆಕಾರರೆಂದು ತಿಳಿದಿರುವರು. ಹಿಂದೂಮುಸ್ಲಿಂ ಸಮಸ್ಯೆಯನ್ನು ದೊಡ್ಡದಾಗಿ ಮಾಡಿರುವರು. ನಾನಾ ಭಾಷೆಗಳಿವೆ ಎಂದು ಅಲ್ಲಿಗಳಿಯುವರು. ನಾನಾ ಮತಗಳಿವೆ ಎನ್ನುವರು. ಅನೇಕ ಆಶ್ರಿತ ಸಂಸ್ಥಾನಗಳಿವೆಯೆನ್ನುವರು. ಕ್ರಿಪ್ಸ್ ಸಂಧಾನವೇ ಸರಿಯಾದುದು ಎನ್ನುವರು. ಖಾಸಿಗಿಯಾಗಿ ರಾಯಿ ಬಹದ್ದೂರರು ಮಾತನಾಡಬೇಕಾಯಿತೇ ವಿನಃ ಸರ್ವಸಾರ್ವಜನಿಕವಾಗಿ ಮಾತನಾಡಲು ಒಂದೇ ಸಲ ಏರ್ಪಾಡು ಮಾಡಿದ್ದರು.

ಮಿ|| ಚರ್ಚಿಲ್ಲರ ಚುಟ್ಟಾ ಪೆಟ್ಟಿಗೆ ಹರಾಜು

ಅಟ್ಲಾಂಟಿಕ್ ಘೋಷಣೆಗೆ ರುಜುಹಾಕಿ ಇಂಗ್ಲೆಂಡಿಗೆ ಹಿಂತಿರುಗಿದಾಗ ಚರ್ಚಿಲರಿಗೆ ಒಹುಮಾನವಾಗಿ ಒಂದ ಚಿನ್ನದ ಪೆಟ್ಟಿಗೆಯು ಅವರ ಸ್ವಹಸಾಕ್ಷರದೊಡನೆ ಹರಾಜು ಹಾಕಲ್ಪಡುವುದೆಂದೂ ಅದು ಯು.ಸಿ.ಸಿ ಚರ್ಚಿಲ್ಲರ ರಷ್ಯಾ ಸಹಾಯ ನಿಧಿಗೆ ಸಲ್ಲುವುದೆಂದೂ ತಿಳಿಯಬಂದಿದೆ.

ವಿಕ್ಟೋರಿಯಾ ಮಹಾರಾಣಿಯವರೂ, ಅವರ ಮೊಮ್ಮಗನೂ

ವಿಕ್ಟೋರಿಯಾ ರಾಣಿಯವರ ಸಂಸಾರವು ದೊಡ್ಡದಾಗಿತ್ತು. ಒಂದು ಹಕ್ಕಾಧಿಸತ್ಯವನ್ನು ತಿಳುವುದು ಎಷ್ಟು ಕಷ್ಟವೋ ಒಂದು ಸಂಸಾರವನ್ನು ನಡೆಸುವುದೂ ಅಷ್ಟು ಕಷ್ಟವೆಂದು ಆಕೆಯು ಹೇಳುತ್ತಿದ್ದಳು. ಒಂದು ಬಾರಿ ಆಕೆಯ ವೈದ್ಯಗೆಳೆಯನೊಬ್ಬನ ಜನ್ಮ ದಿನವು ಸಮೀಪಿಸುತ್ತಲಿತ್ತು. ಈ ವಿಷಯವನ್ನು ಆತನು ತನ್ನ ಅಜ್ಜಿಗೆ ಪತ್ರವು ಖೀನ ತಿಳಿಸಿದನು. ಅದರಲ್ಲಿ ಹಣ ಸಹಾಯ ಮಾಡಿದಲ್ಲಿ ಬಹಳ ಅನುಕೂಲವೆಂದೂ ತಿಳಿಸಿದ್ದನು. ಆಕೆಯು ಆತನ ಸಾಹಸವನ್ನಾಕ್ಷೇಪಿಸಿ ಉತ್ತರವನ್ನಿತ್ತಳು. ಆತನು ಪುನಃ ಆದಕ್ಕೆ ಉತ್ತರವನ್ನು ಬರೆದು ರಾಣಿಯವರಿಗೆ ಕಳುಹಿಸಿದನು. ಅದರಲ್ಲಿ ಈ ರೀತಿ ಬರೆದಿದ್ದನು— ಅಜ್ಜಿಯವಳೇ ! ನಿಮ್ಮ ಉಷ್ಣ ದೇಶದಿಂದ ಕೂಡಿದ ಪತ್ರಕ್ಕೆ ಅನೇಕ ವಂದನೆಗಳು. ಈ ಪತ್ರವನ್ನು ನಾನು ಐದು ಪೌಂಡುಗಳಿಗೆ ಮಾರಿದೆನು.

ಜರ್ಮನಿಯ ಕಾಗದಕ್ಕೆ ಕ್ಷಾಮಬಂದಿರುವುದಾಗಿಯೂ ಅನೇಕ ಪ್ರಕಟಣೆಗಾರರ ಪ್ರಕಟಣೆಗಳು ನಿಲ್ಲುವುದೆಂದೂ ತಿಳಿಯಬಂದಿದೆ.

ಪ್ರಪಂಚದ ನಾನಾ ಭಾಗದಿಂದ ಬಂದ ನಿರಾಶ್ರಿತರಿಗೆ ಆಶ್ರಯ ಕೊಟ್ಟು ಆಹಾರ ಒದಗಿಸಲು ಈಗ 43 ರಾಜ್ಯಗಳು ಒಟ್ಟುಗೂಡಿ ಮುಂದಿನ ತಿಂಗಳು ವಾಷಿಂಗ್ಟನ್ನಿನಲ್ಲಿ ಸಭೆ ಸೇರಿ ಹೇಗೆ ನಿರಾಶ್ರಿತರಿಗೆ ಸಹಾಯ ಮಾಡಬೇಕೆಂದು ಆಲೋಚಿಸುವರು.

ಒಂದು ವರ್ಷದಿಂದ ಆಂಗ್ಲೇಯರು ಒಂದು ಏರ್‌ಕ್ರಾಫ್ಟ್ ಕ್ಯಾರಿಯರನ್ನು ಸಂಚಾರಕ್ಕೆ ಬಿಟ್ಟಿರುವರು. ಇದರ ತೂಕ 23000 ಟನ್. ಇದರಲ್ಲಿ 1600 ಜನರು ಕೆಲಸಕ್ಕಿರುವರು. ಇದರ ವೇಗ ಮಾತ್ರ ಬಹಳ ಗುಟ್ಟಾಗಿಟ್ಟಿರುವರು. ಇದರಿಂದ ಶತ್ರುಗಳ ಸಬ್‌ಮೆರೀನಿನ ಹಾವಳಿ ಕಮ್ಮಿಯಾಗಬಹುದೆಂದು ನಿರೀಕ್ಷಣೆಯಿದೆ.

ಇಂಡಿಯಾದಲ್ಲಿ ಕೆಮ್ಮೀ ಬೆಲೆಯ ಬಟ್ಟೆಗಳನ್ನು ಕೊಡಲು ಪ್ರಾಂತಿಕ ಅಧಿಕಾರಿಗಳಿಂದ ಕೂಡಿದ ಒಂದು ಸಮಿತಿಯನ್ನು ನೇಮಿಸಿ ಬೇಗನೆ ಇಂಡಿಯಾದ ನಾನಾಭಾಗದ [illegible] ಮಾಡಲು ಸರ್ಕಾರದವರು ಪ್ರಯತ್ನ ಮಾಡುತ್ತಿರುವರು.

ಜಪಾನೀಯರು ಸಂಸ್ಕೃತ ಕಲಿತದ್ದು ಬ್ರಾಹ್ಮಣರಿಂದ

ಹಿಂದೆ ಬೋಧಿಸ್ವ ಭಾರದ್ವಾಜ ಎಂಬ ಬ್ರಾಹ್ಮಣನು ಹಿಂದೂಸ್ತಾನದ ಇನ್ನೊಬ್ಬ ಉಪಾಧ್ಯಾಯರೊಡಗೂಡಿ ಚಂಪ (ಈಗಿನ ಕೊರ್ಚಿ ಚೈನಾ) ದಿಂದ ಜಪಾನಿನಲ್ಲಿಯ ಒಸೆಕಾಕ್ಕೂ ನಂತರ ನಾರಾಕ್ಕೂ ಹೋದರು. ಅಲ್ಲಿ ಒಬ್ಬ ಹಿಂದೂ ಯೋಗಿಯನ್ನು ಭೇಟಿಮಾಡಿ ಜಪಾನಿಯರಿಗೆ ಸಂಸ್ಕೃತವನ್ನು ಕಲಿಸಿದರು ಈ ಭಾರದ್ವಾಜರವರನ್ನು ಬ್ರಾಹ್ಮಣ ಬಿಷಪ್ ಎಂದು ಜಪಾನೀಯರು ಕರೆಯುತ್ತಿದ್ದರು. ಈಗಲೂ ಈ ಭಾರದ್ವಾಜರ ಸಮಾಧಿಯನ್ನೂ ಅವರ ಮೇಲೆ ಇವರು ಮಾಡಿರುವ ಕೆಲಸವನ್ನು ಕಲ್ಲಿನ ಮೇಲೆ ಕೆತ್ತಿರುವುದನ್ನೂ ಈಗಲೂ ನೋಡಬಹುದು ಈ ಕಾಲದಲ್ಲೇ ಜಪಾನಿ ಅಕ್ಷರಮಾಲೆ ಪ್ರಾರಂಭವಾದುದು

ಚಿಟಿಗಾಂಗಿನಲ್ಲಿ ಸರ್ಕಾರಿ ಸರಂಜಾಮ